ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು–560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 08.04.2022

# ಚಿಕ್ಕಬಳ್ಳಾಪುರ ಜಿಲ್ಲೆಗೆ ಸೀಮಿತವಾಗಿದೆ

## ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)
## (ದಿನಾಂಕ 09–04–2022 ರಿಂದ 13–04–2022 ವರೆಗೆ)

| ನಿಯತಾಂಕಗಳು | 09.4.2022 | 10.4.2022 | 11.4.2022 | 12.4.2022 | 13.4.2022 |
|---|---|---|---|---|---|
| ಮಳೆ (ಮಿ ಮಿ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 34 | 34 | 34 | 34 | 34 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21 | 21 | 21 | 21 | 21 |
| ಮೋಡ ( ಪ್ರಮಾಣ) | 3 | 3 | 3 | 3 | 3 |
| ಅರ್ದ್ರತೆ 7.20 ಬೆ (ಶೇ) | 71 | 71 | 68 | 68 | 68 |
| ಅರ್ದ್ರತೆ 2.20 ಮ (ಶೇ) | 38 | 38 | 36 | 36 | 36 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 3 | 2 | 3 | 3 | 4 |
| ಗಾಳಿಯ ದಿಕ್ಕು ( ಡಿಗ್ರಿ) | 79 | 72 | 90 | 90 | 120 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಮಳೆಯಾಗುವ ಸಾಧ್ಯತೆ ಕಡಿಮೆ. ದಿನದ ಗರಿಷ್ಠ ಉಷ್ಣಾಂಶ $34.0^{o}$ C ಮತ್ತು ಕನಿಷ್ಠ $21.0^{o}$ C ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **68-71 %** ಇದ್ದು ಮಧ್ಯಾಹ್ನ **36-38 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **2–4** ಕಿ.ಮೀ. ವೇಗದಲ್ಲಿ ಬೀಸುವ ಸ೦ಭವವಿದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| ಸಾಮಾನ್ಯ ಸಲಹೆಗಳು | | 1. ಕೆರೆಗಳಲ್ಲಿ ಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು.<br>2. ಹಿಂಗಾರಿ ಬೆಳೆಗಳ ಉಳಿಕೆಗಳನ್ನು ಸುಡಬಾರದು, ಅದನ್ನು ಗೊಬ್ಬರ ತಯಾರಿಸಲು ಉಪಯೋಗಿಸಬೇಕು.<br>3. ಕಳೆದ ಎರಡು ತಿಂಗಳಿನಿಂದ ಒಣ ಹವೆ ಇರುವುದರಿಂದ ತೋಟಗಾರಿಕೆ ಬೆಳೆಗಳಾದ ಮಾವು, ಹಲಸು, ಹುಣಸೆ, ಸಪೋಟ, ಬೆಟ್ಟದನೆಲ್ಲಿ ಹಾಗು ಅರಣ್ಯ ಬೆಳೆಗಳಾದ ಹೆಬ್ಬೇವು, ಬೇವು ಮುಂತಾದ ಮರಗಿಡಗಳಲ್ಲಿ ಗೆದ್ದಲು ಹುಳುಗಳ ಭಾದೆಯು ಹೆಚ್ಚಾಗಿದ್ದು ಇದರ ಹತೋಟಿಗೆ ಆಲ್ಡರಿನ್ ಕೀಟನಾಶಕದಿಂದ ಉಪಚರಿಸಿ ಗೆದ್ದಲು ಹುಳುಗಳನ್ನು ನಿಯಂತ್ರಿಸಿ.<br>4. ತೊಗರಿ ಬೆಳೆ ಕಟಾವು ಮಾಡಿ ಅಲ್ಲಿನ ಕಡ್ಡಿಗಳನ್ನು ರಾಶಿ ಮಾಡಿ ಸ್ವಚ್ಛಮಾಡಿ ಇದರಿಂದ ಸೊರಗು ರೋಗವು ಮುಂದಿನ ಬೆಳೆಗೆ ಹರಡುವುದನ್ನು ತಡೆಯಬಹುದು.<br>5. ಕೊಯ್ಲು ಮಾಡಿದ ತೊಗರಿ ಮತ್ತು ಇನ್ನಿತರ ದ್ವಿದಳ ಧಾನ್ಯಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ಒಕ್ಕಣೆ ಮಾಡಿ ಶುಚಿಗೊಳಿಸಿ ಚೀಲಗಳಲ್ಲಿ ಶೇಖರಣೆ ಮಾಡುವುದು.<br>6. ಕಟಾವು ಮಾಡಿದ ಬಿತ್ತನೆ ಬೀಜಗಳನ್ನು ಸರಿಯಾಗಿ ಒಣಗಿಸಬೇಕು. ಅಂದರೆ ಏಕದಳ ದಾನ್ಯಗಳು ತೇವಾಂಶ ಶೇ. 11 ರಿಂದ 12, ದ್ವಿದಳದಾನ್ಯಗಳ ತೇವಾಂಶ ಶೇ.9, ಎಣ್ಣೆಕಾಳುಗಳು ಶೇ.8 ಮತ್ತು ತರಕಾರಿ ಬೀಜಗಳು ಶೇ 5 ರಿಂದ 6 ರಷ್ಟಿರಬೇಕು. ಇದರಿಂದ ಹೆಚ್ಚುದಿನ ಕೆಡದಂತೆ ಬೀಜಗಳನ್ನು ಸಂಸ್ಕರಣೆ ಮಾಡಬಹುದು ಜೊತೆಗೆ ಉಗ್ರಾಣ ಕೀಟದ ಬಾಧೆಯನ್ನು ಕಡಿಮೆಮಾಡಬಹುದು.<br>7. ದ್ವಿದಳದಾನ್ಯಗಳನ್ನು ಸಂಸ್ಕರಣಾ ಕೀಟಗಳಿಂದ ರಕ್ಷಿಸಲು ಎಣ್ಣೆಯ ಲೇಪನಮಾಡಿ ಸಂಗ್ರಹಿಸಬೇಕು (ಔಡಲ, ಅಗಸಿ, ಹೊಂಗೆ ಅಥವಾ ಬೇವಿನ ಎಣ್ಣೆ) ಪ್ರತಿ ಕಿ.ಗ್ರಾಂ ಬೀಜಕ್ಕೆ 3 ರಿಂದ 5 ಮಿ.ಲೀ. ಎಣ್ಣೆಯನ್ನು ಉಪಯೋಗಿಸಬೇಕು. |
| ಮಾವು | ಗೊಟ್ಟೆ ಹಂತ ಮತ್ತು ಗೊಟ್ಟೆ ಹಂತದಿಂದ ಕಾಯಿ ಗಾತ್ರ ಹೆಚ್ಚಾಗುವ/ಅರಳುವ ಹಂತ | 1. ಮಾವು ಬೆಳೆಯಲ್ಲಿ ಕಾಯಿ ಉದುರುವುದು ಕಂಡು ಬಂದಿದೆ. ಮಾವಿನ ಬೆಳೆ ಕಾಯಿಕಟ್ಟುವ (ಗೊಟ್ಟೆ ಹಂತ) ಹಂತದಲ್ಲಿ ಇದ್ದು, ರೈತರು ತಪ್ಪದೆ ನೀರಿನ ನೀರುಣಿಸಬೇಕು.<br>2. ನೀರಿನ ಅನುಕುಲತೆಗಳು ಹೆಚ್ಚಿಗೆ ಇದ್ದ ರೈತರು ಕಾಯಿಕಟ್ಟುವ ಹಂತದಿಂದ ಮಾಗುವ ಹಂತದವರೆಗೆ ಪ್ರತಿ 15–20 ದಿನಗಳಿಗೊಮ್ಮೆ ನೀರುಣಿಸಬೇಕು.<br>3. ಮಾವಿನಲ್ಲಿ ಕಾಯಿಗಳು ಉದುರುವುದನ್ನು ತಡೆಗಟ್ಟಲು ಗೊಟ್ಟೆ ಹಂತದಲ್ಲಿ ನ್ಯಾಪ್ತಲೀನ್ ಅಸಿಟಿಕ್ |

| | | |
|---|---|---|
| | | ಆಸಿಡ್ 20 ಪಿ.ಪಿ.ಎಮ್. 15 ದಿನಗಳಿಗೊಮ್ಮೆ 2 ಬಾರಿ ಕೊಡುವುದು<br>4. ಹೂ ಬಿಡುವುದಕ್ಕೆ ಮುಂಚೆ ಹಾಗೂ ಕಾಯಿ ಕಚ್ಚಿದ ಕೂಡಲೇ ಜಿಗಿಹುಳು ಮತ್ತು ಬೂದಿರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ 4ಗ್ರಾಂ ಕಾರ್ಬರಿಲ್ (50 wp) ಅಥವಾ 0.3 ಮಿ.ಲೀ ಇಮಿಡಾಕ್ಲೋಪ್ರಿಡ್ 200.ಎಸ್.ಎಲ್ ಅಥವಾ 0.5 ಮಿ.ಲೀ ಲ್ಯಾಂಬ್ಡಾ ಸೈಯೋಲೋಥ್ರಿನ್ (5 ಇಸಿ) ಜೊತೆಗೆ 3ಗ್ರಾಂ. ನೀರಿನಲ್ಲಿ ಕರಗುವ ಗಂಧಕ (ಸಲ್ ಟಾಫ್ 80wp) ಪ್ರತಿ ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಿ.<br>5. ಜಿಗಿಹುಳುವಿನ ಹಾವಳಿ ತೀವ್ರವಾಗಿದ್ದಲ್ಲಿ ಅಝಾಡಿರೆಕ್ಟಿನ್ (10,000 ಪಿ.ಪಿ.ಎಮ್) 7 ಮಿ.ಲೀ/ಲೀ ನೀರಿನಲ್ಲಿ ಸಿಂಪಡಿಸಿ.<br>6. ಮಾವಿನ ಗಿಡದ ಕೆಳಗೆ ಬೆಳೆದಿರುವ ಹುತ್ತಗಳನ್ನು ನಾಶಪಡಿಸಬೇಕು ಮತ್ತು ಗೆದ್ದಲು ಹುಳುಗಳನ್ನು ನಾಶಪಡಿಸಲು ಕ್ಲೋರೊಪೈರಿಫಾಸ್ 5–10 ಮಿ.ಲೀ/ಪ್ರತಿ ಲೀ ನಿರಿಗೆ ಬೆರಸಿ ಹುತ್ತಗಳಿಗೆ ಸುರಿಯಬೇಕು ಅಥವಾ ಒಂದು ಮೀಟರ್ ಸುತ್ತಳತೆ ಇರುವ ಹುತ್ತಕ್ಕೆ 2 ಅಲ್ಯೂಮಿನಿಯಂ ಪಾಸ್ಫೈಡ್ ಮಾತ್ರೆಗಳನ್ನು ಹಾಕಿ ಗಾಳಿ ಹೊರ ಹೋಗದಂತೆ ಎಲ್ಲಾ ರಂಧ್ರಗಳನ್ನು ಹಸಿ ಮಣ್ಣಿನಿಂದ ಮುಚ್ಚಿ. |
| **ಪಶುಸಂಗೋಪನೆ** | | 1. ಕಟಾವಾದ ಜೋಳವನ್ನು ಉಪಯೋಗಿಸಿಕೊಂಡು ರಸಮೇವನ್ನು ತಯಾರಿಸಿ ರಾಸುಗಳಿಗೆ ಪೌಷ್ಟಿಕವಾದಂತಹ ಮೇವನ್ನು ಒದಗಿಸಬಹುದು.<br>2. ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.) ದ್ವಿದಳ ಧಾನ್ಯಗಳ ಬೆಳೆಗಳಲ್ಲಿ ಕರಗುವ ಶರ್ಕರ ಪದಾರ್ಥಗಳು ಕಡಿಮೆ ಇದ್ದು ತೇವಾಂಶ ಹೆಚ್ಚಿರುವುದರಿಂದ ಬೆಳೆಗಳನ್ನು ಸ್ವಲ್ಪ ಬಾಡಿಸಿ ಉಪಯೋಗಿಸಬೇಕು. ದ್ವಿದಳ ಧಾನ್ಯದ ಸೊಪ್ಪುಗಳನ್ನು ರಸ ಮೇವಿನಲ್ಲಿ ಶೇ.10 ರಿಂದ 15 ರಷ್ಟು ಮಾತ್ರ ಉಪಯೋಗಿಸಬೇಕು.<br>3. ಬೆಳೆಯಲ್ಲಿ ಶೇ. 65–70 ರಷ್ಟು ತೇವಾಂಶ ಇರಬೇಕು. ತೇವಾಂಶ ಇದಕ್ಕಿಂತಲೂ ಕಡಿಮೆಯಾದರೆ ಹುದುಗುವಿಕೆ ವಿಫಲಗೊಂಡು ಕಳಪೆ ಗುಣಮಟ್ಟದ ಕಂದು ಬಣ್ಣದ ರಸಮೇವು ತಯಾರಾಗುತ್ತದೆ. ಇದೇ ರೀತಿ ಮೇವಿನಲ್ಲಿ ತೇವಾಂಶ ಶೇ.70 ಕ್ಕಿಂತಲೂ ಹೆಚ್ಚಿದ್ದರೆ ರಸಸಾರ ಹೆಚ್ಚಾಗಿ ಮೇವು ಹುಳಿಯಾಗಿ ಕೊಳೆತ ವಾಸನೆಯಿಂದ ಕೂಡಿರುತ್ತದೆ. |
| | | **ಬೇಸಿಗೆ ತಿಂಗಳಿನಲ್ಲಿ ಪಶು ಸಂಗೋಪನಾ ಸಲಹೆಗಳು :**<br>1. ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂಡುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸಮೇವನ್ನು ತಯಾರಿಸಿ ಮತ್ತು ಒಣ ಹುಲ್ಲು ಮತ್ತು ಬೆಳೆಯ ಉಳಿಕೆಗಳನ್ನು ದನಕರುಗಳಿಗೆ ಕೊಡಿ.<br>2. ದನಕರುಗಳ ಕೊಟ್ಟಿಗೆಯ ಮೇಲೆ 4–6 ಇಂಚು ಹುಲ್ಲಿನ ಹೊದಿಕೆಯನ್ನು ಹಾಕಿ, ಮದ್ಯಾಹ್ನದಲ್ಲಿ 2–3 ಸಲ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೂ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>3. ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಆಡುವಂತೆ ವ್ಯವಸ್ಥೆ ಮಾಡಬೇಕು.<br>4. ಸ್ವಚ್ಛವಾದ ನೀರನ್ನು ಮೇಲಿಂದ ಮೇಲೆ ಕುಡಿಸಬೇಕು.<br>5. ರಾಸುಗಳನ್ನು ಬಿಸಿಲಿಗೆ ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ರಾಸುಗಳನ್ನು ಮೇಯಲು ಬಿಡಬೇಕು. |
| **ರೇಷ್ಮೆ ಸಾಕಾಣಿಕೆ** | | 1. ರೇಷ್ಮೆ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಪ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.